**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ**

**ಸಿ.ಸಿ ಃ 257/2021**

ಸಾಕ್ಷಿದಾರರ ಹೆಸರು ಃ ಶಶಿಕುಮಾರ್

ಸಿ.ಡಬ್ಲ್ಯೂ- **6**

ತಂದೆಯ ಹೆಸರು ಃರುದ್ರಪ್ಪ

ಪಿ.ಡಬ್ಲ್ಯೂ- **5**

ವಯಸ್ಸು ಃ **33** ವರ್ಷ

ಉದ್ಯೋಗ ಃಎಪಿ ಸಿ , ಜಯಪುರ ಪೊಲೀಸ್ ಠಾಣೆ

ವಾಸಸ್ಥಳ ಃ ಬಾಳೆಹೊನ್ನೂರು

ದಿನಾಂಕಃ **10.03.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ

ನಾನು 2019 ರಿಂದ 2024 ರವರೆಗೆ ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಎ ಪಿ ಸಿ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 20.01.2020 ರಂದು ಚಾಸಾ-1 ರವರಿಗೆ ಬಾಳೆಹೊನ್ನೂರು ಸುದರ್ಶನ್ ಚಿತ್ರಮಂದಿರದ ಹತ್ತಿರ ಒಬ್ಬ ವ್ಯಕ್ತಿ ಕಾರಿನಲ್ಲಿ ಕುಳಿತು ಬರುವ ಹೋಗುವ ವ್ಯಕ್ತಿಗಳಿಗೆ ಗಾಂಜಾ ಮಾರಾಟ ಮಾಡುತ್ತಿರುವುದಾಗಿ ಬಂದ ಮಾಹಿತಿ ಮೇರೆಗೆ ಸದರಿ ವಿಚಾರವನ್ನು ನಮಗೆ ತಿಳಿಸಿದ್ದು ನಾವು ಚಾಸಾ-1 ರವರ ಜೊತೆ ಚಾಸಾ-2 ಮತ್ತು 3 ರವರಿಗೆ ನೋಟೀಸು ನೀಡಿ ದಾಳಿಗೆ ಸಹಕರಿಸಲು ಸದರಿಯವರು ಒಪ್ಪಿದ ಮೇರೆಗೆ ಚಾಸಾ-4 ರವರನ್ನು ಬರಮಾಡಿಕೊಂಡು ಅವರನ್ನು ಕರೆದುಕೊಂಡು ಕೃತ್ಯ ಸ್ಥಳದ ಹತ್ತಿರ ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಕಾರಿನಲ್ಲಿ ಕುಳಿತುಕೊಂಡು ಕೈಯಲ್ಲಿ ಕವರ್ ಇಟ್ಟುಕೊಂಡಿದ್ದು, ಸೊಪ್ಪಿನ ತರಹದ ವಸ್ತು ಕಾಣುತ್ತಿದ್ದು, ಸದರಿ ಬಗ್ಗೆ ವಿಚಾರಿಸಿದಾಗ ಅವನ ಹೆಸರು ಮೊಹಮ್ಮದ್ ಸಲ್ಮಾನ್ ಎಂದು ತಿಳಿಸಿದ್ದು, ವರದಿಯನ್ನು ತಯಾರಿಸಿ ಚಾಸಾ-1 ರವರು ಚಾಸಾ-5 ರವರಿಗೆ ನೀಡಿ ಠಾಣೆಗೆ ಕಳುಹಿಸಿದ್ದು, ನಂತರ ಸದರಿ ವ್ಯಕ್ತಿಯನ್ನು ಹಿಡಿದು ಕೇಳಲಾಗಿ ಆತನ ಹೆಸರು ಮೊಹಮ್ಮದ್ ಬಾಳೆಹೊನ್ನೂರು ವಾಸಿ ಮತ್ತು ಚಾಸಾ-4 ರವರ ಮುಂದೆ ಅಂಗಶೋಧನೆ ಮಾಡಿದಾಗ ಆತನ ಪ್ಯಾಂಟಿನ ಜೇಬಿನಲ್ಲಿ ಪ್ಲಾಸ್ಟಿಕ್ ಕವರ್ ಇದ್ದು ಅದರಲ್ಲಿ

ಸೊಪ್ಪು ತುಂಬಿದ್ದು, ತನ್ನ ಶರ್ಟಿನಲ್ಲಿ ರೂ. 150/- ಇದ್ದು ಕೇಳಲಾಗಿ ಗಾಂಜಾ ಮಾರಾಟ ಮಾಡಿ ಬಂದ ಹಣ ಎಂದು ತಿಳಿಸಿದ್ದು, ಚಾಸಾ-4 ರವರ ಸಮಕ್ಷಮ ಮಹಜರ್ ಮಾಡಿ ಗಾಂಜಾ ಮತ್ತು ಕಾರನ್ನು ಮತ್ತು ಮೊಬೈಲನ್ನು ಜಪ್ತು ಮಾಡಿಕೊಂಡಿರುತ್ತೇವೆ, ಸದರಿ ಸಮಯದಲ್ಲಿ ಪೋಟೋ ತೆಗೆದಿರುತ್ತೇವೆ. ಈ ಸಂಬಂಧ ನನ್ನನ್ನು ವಿಚಾರಿಸಿದ್ದು ನಾನು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ. ಸಾಕ್ಷಿ ಗಾಂಜ ಮತ್ತು ಹಣವನ್ನು ನೋಡಿ ಗುರುತಿಸಿದ್ದು ಅವು ಈಗಾಗಲೇ ಎಂಒ-1 ಮತ್ತು 2 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ.ಎನ್ ವಿ ಎಸ್ ವಕೀಲರಿಂದ ಃ</u>

ಅಂಗಶೋಧನೆಗೆ ಸಂಬಂಧಿಸಿ ಪ್ರತ್ಯೇಕವಾಗಿ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿ. ನಾವುಗಳು ಈ ಸಮಯದಿಂದ ಈ ಸಮಯದವರೆಗೆ ನಮ್ಮ ಅಂಗಶೋಧನೆ ಮಾಡಿಕೊಂಡಿರುತ್ತೇವೆಂದು ಎಲ್ಲಿಯೂ ಸಹ ನಮೂದು ಇರುವುದಿಲ್ಲ ಎಂದರೆ ಸರಿ. ಚಾಸಾ-4 ರವರಿಗೆ ಯಾರು ಮನವಿ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಜೆ ಸಿ ಸರ್ಕಲ್ ಮತ್ತು ಮುಖ್ಯ ರಸ್ತೆಯಲ್ಲಿ ಸಾಕಷ್ಟು ಮನೆಗಳು ಹಾಗೂ ಜನಸಂದಣಿ ಇರುತ್ತದೆ ಎಂದರೆ ಸರಿ. ಸದರಿಯವರನ್ನು ನಾವು ಪಂಚರಾಗಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

ನಾವು ಆರೋಪಿಯ ಮೇಲೆ ನಿಗಾ ವಹಿಸಿದಾಗ ಯಾರೇ ಸಾರ್ವಜನಿಕರು ಬಂದು ಆರೋಪಿಯಿಂದ ಗಾಂಜಾ ಪಡೆದುಕೊಂಡಿರುವುದಿಲ್ಲ. ಆರೋಪಿಯ ಬಗ್ಗೆ ಯಾರನ್ನು ವಿಚಾರಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಿಪಿ-3 ರಲ್ಲಿ ಯಾವುದೇ ತೂಕದ ಯಂತ್ರ ಕಾಣುತ್ತಿಲ್ಲ ಎಂದರೆ ಸರಿ. ಸುದರ್ಶನ್ ಚಿತ್ರಮಂದಿರ ಎಂದು ನಿಪಿ-3 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ಚಾಸಾ-4 ರವರನ್ನು ಯಾರು ಬರಮಾಡಿಕೊಂಡಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಜೊತೆ ಇದ್ದವರು ಚಾಸಾ-4 ರವರನ್ನು ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ, ಯಾವುದೇ ಮಹಜರ್ ಮಾಡಿರುವುದಿಲ್ಲ, ಯಾವುದೇ ಪೋಟೋ ತೆಗೆದಿರುವುದಿಲ್ಲ, ನನ್ನ ಸಮಕ್ಷಮ ಯಾವುದೇ

ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ